## ರೈತರ ದುಂಡು ಮೇಜಿನ ಸಭೆ ಆಗ್ರಹ

# 'ಬಹುರಾಷ್ಟ್ರೀಯ ಕಂಪನಿಗಳ ನೆರವು ತಿರಸ್ಕರಿಸಿ'

**ಸುದ್ದಿಮೂಲ ವಾರ್ತೆಗುಲ್ಬರ್ಗ, ಡಿ.5-** ಕೃಷಿ ವಿಶ್ವವಿದ್ಯಾಲಯ ಗಳು ಹಾಗೂ ಕೃಷಿ ವಿಜ್ಞಾನ ಕೇಂದ್ರಗಳು ನಡೆಸುವ ಸಂಶೋಧನೆಯಲ್ಲಿ ರೈತರ ಸಲಹೆ-ಸೂಚನೆ ಹಾಗೂ ಅಭಿಪ್ರಾ ಯಗಳಿಗೆ ಆದ್ಯತೆ ನೀಡಬೇಕು ಎಂದು ಇಲ್ಲಿ ನಡೆದ ರೈತರ ದುಂಡು ಮೇಜಿನ ಸಭೆ ಒತ್ತಾಯಿಸಿದೆ.

ಕಳೆದ ವರ್ಷ ಬೆಂಗಳೂರಿನಲ್ಲಿ ನಡೆದ 'ರೈತ ತೀರ್ಪು' ಕಾರ್ಯಕ್ರಮ ದಲ್ಲಿ ರೈತರು ನೀಡಿದ ತೀರ್ಪುಗಳನ್ನು ಅನುಷ್ಠಾನ ಮಾಡುವ ಸಾಧ್ಯತೆಗಳ ಕುರಿತು ಇಲ್ಲಿ ನಡೆದ ರೈತರ ಸಭೆಯು ಸಂಶೋಧನೆಗಳ ವಿವಿಧ ಆಯಾಮ ಗಳನ್ನು ಚರ್ಚಿಸಿತು. ರೈತ ಸಂಘಟನೆಗಳ ಮುಖಂಡರು, ಸ್ವಯಂಸೇವಾ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ರೈತರು ಸೇರಿದಂತೆ ಒಟ್ಟು 40 ಜನರು ಈ ಸಭೆಯಲ್ಲಿ ಭಾಗವಹಿಸಿದ್ದರು.

> **ನಿರ್ಣಯಗಳು:**
>
> ಜಗತ್ತಿನಲ್ಲಿ ಮೊದಲ ಬಾರಿಗೆ ನಡೆದ 'ರೈತ ತೀರ್ಪು' ಕಾರ್ಯಕ್ರಮದಲ್ಲಿ ಧ್ವನಿವಂಚಿತ, ಬುಡಕಟ್ಟು ದಲಿತ ವರ್ಗದ ಸಣ್ಣ ರೈತರು ತಮಗೆ ಎಂಥ ಸಂಶೋಧನೆ ಬೇಕು ಎಂಬ ತೀರ್ಪು ನೀಡಿದ್ದಾರೆ.
>
> ಈ ತೀರ್ಪುಗಳನ್ನು ಅನುಷ್ಠಾನ ಮಾಡಲು ಗ್ರಾಮ ಮಟ್ಟದಲ್ಲಿ ಚರ್ಚಿಸಬೇಕು; ಕೃಷಿ ಸಂಶೋಧಕರು ರೈತರ ಅಭಿಪ್ರಾಯಕ್ಕೆ ಆದ್ಯತೆ ನೀಡಬೇಕು ಎಂಬಿತ್ಯಾದಿ 10 ನಿರ್ಣಯಗಳನ್ನು ಅಂಗೀಕರಿಸಲಾಯಿತು.

'ದಕ್ಷಿಣ ಏಷ್ಯಾದಲ್ಲಿ ಕೃಷಿ ಸಂಶೋಧನೆಯ ಪ್ರಜಾ ತಾಂತ್ರೀಕರಣ ಮೈತ್ರಿಕೂಟ' ('ಆದರ್ಶ') ರಾಜ್ಯದಲ್ಲಿ ನಡೆಸಿದ ಮೂರನೇ ದುಂಡು ಮೇಜಿನ ಸಭೆ ಇದಾಗಿತ್ತು.

ಸರ್ಕಾರದಿಂದ ಅನುದಾನ ಪಡೆಯುವ ಕೃಷಿ ವಿಶ್ವವಿದ್ಯಾಲಯಗಳು, ತಮ್ಮ ಚಟುವಟಿಕೆಗಳಿಗೆ ಬಹುರಾಷ್ಟ್ರೀಯ ಕಂಪೆನಿಗಳಿಂದ ಧನಸಹಾಯ ಪಡೆಯಬಾರದು ಎಂದು ಒತ್ತಾಯಿಸಿದ ಸಭೆಯು, ಕೃಷಿ ಸಂಶೋಧನೆಯು ಕೇವಲ ಏಮ್ಮುಖವಾಗದೇ ಅದರ ಪ್ರಜಾತಾಂತ್ರೀಕರಣವಾಗುವ ಅಗತ್ಯವನ್ನು ಪ್ರತಿಪಾದಿಸಿತು.

ಕರ್ನಾಟಕ ರಾಜ್ಯ ರೈತ ಸಂಘದ ಉಪಾಧ್ಯಕ್ಷ ಬಸವರಾಜ ತಂಬಾಕೆ ಮಾತನಾಡಿ, ದೇಶದ ಶೇ 70ರಷ್ಟು ಜನಸಂಖ್ಯೆ ಕೃಷಿ ಮೇಲೆಯೇ ಅವಲಂಬಿತವಾಗಿದ್ದರೂ ಸಂಸತ್ತು ಅಥವಾ ವಿಧಾನಸಭೆಯಲ್ಲಿ ಕೃಷಿಕರಿಗೆ ಆದ್ಯತೆ ಸಿಗುತ್ತಿಲ್ಲ ಎಂದು ಕಳವಳ ವ್ಯಕ್ತಪಡಿಸಿದರು. ತೊಗರಿ ಬೆಳೆಗಾರರ ಸಂಘದ ಅಧ್ಯಕ್ಷ ಬಸವರಾಜ ಇಂಗಿನ, ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ನೀತಿಗಳನ್ನು ರೂಪಿಸುವಾಗ ರೈತರ ಜತೆ ಸಮಾಲೋಚಿಸಿಯೇ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು.

'ಆದರ್ಶ'ದ ದಕ್ಷಿಣ ಏಷ್ಯಾ ಸಂಚಾಲಕ ಪಿ.ವಿ.ಸತೀಶ್ ಪ್ರಾಸ್ತಾವಿಕ ಮಾತನಾಡಿ, ರೈತರ ಬೇಕು-ಬೇಡ ಗಳತ್ತ ಗಮನ ಹರಿಸದೇ ನಡೆಯುತ್ತಿರುವ ಸಂಶೋಧನೆಗಳು ಕೃಷಿ ಕ್ಷೇತ್ರದ ಬಿಕ್ಕಟ್ಟಿಗೆ ಕಾರಣವಾಗಿವೆ. ಈ ಹಿನ್ನೆಲೆಯಲ್ಲಿ ರೈತರ ದನಿಗೆ ವೇದಿಕೆ ಕಲ್ಪಿಸಿದ್ದು ರೈತ ತೀರ್ಪು ಕಾರ್ಯಕ್ರಮ ಎಂದು ಬಣ್ಣಿಸಿದರು.

ರೈತ ಕೃಷಿ ಕೂಲಿಕಾರರ ಸಂಘದ ಮುಖಂಡ ವಿ.ಜಿ.ದೇಸಾಯಿ, ರೈತ ಸಂಘದ ಮುಖಂಡರಾದ ವಿಶ್ವನಾಥ ಪಾಟೀಲ, ಸಿದ್ರಾಮಪ್ಪ, ದೇವೇಂದ್ರಪ್ಪ ಭೋಯಿ, ರಾಚರೆಡ್ಡಿ ಇತರರು ಮಾತನಾಡಿದರು. ಬಯಲುಸೀಮೆ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ನಿರ್ದೇಶಕ ಸುಬ್ಬಣ್ಣ ಬಿರಾದಾರ ಸ್ವಾಗತಿಸಿ, ವಂದಿಸಿದರು.